ಸಮುದ್ರ ಮಥನ




**ಮಾಹಿತಿಪೂರ್ಣ**

'ಮಕ್ಕಳ ಊಟ ಪೌಷ್ಟಿಕವಲ್ಲ', ಎಸ್.ಜಿ. ತುಂಗರೇಣುಕ ಅವರ ಮುಖಪುಟ ಲೇಖನ (ಸುಧಾ, ಏಪ್ರಿಲ್ 27) ಓದಿ ಆತಂಕವಾಯಿತು. ಬಡವರ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗುವುದು ದುರ್ಲಭವಾದರೂ ಶ್ರೀಮಂತರ ಮಕ್ಕಳೂ ಪೌಷ್ಟಿಕಾಂಶದ ಕೊರತೆ ಯಿಂದ ಬಳಸುವುದು ವಿಷಾದದ ಸಂಗತಿ. ಪೋಷಕರು ಇದನ್ನು ಗಂಭೀರವಾಗಿ ತೆಗೆದು ಕೊಳ್ಳುವುದು ಸೂಕ್ತ. ಲೇಖನ ಮಾಹಿತಿಪೂರ್ಣ.

—ಸು.ವಿಜಯಲಕ್ಷ್ಮಿ ಶಿವಮೊಗ್ಗ, ಬಿ.ಎಂ. ಶಿವಲಿಂಗೇಗೌಡ ಚೇವಿನಹಳ್ಳಿ, ಪಿ.ಗೋವಿಂದರಾಜ್ ಶಿವಮೊಗ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

**ಚಿಂತನಾರ್ಹ ಬರಹ**

'ನಿಮ್ಮೊಡನೆ'ಯಲ್ಲಿ 'ಬೆಂಗಳೂರು ಮತ್ತು ಆತ್ಮಹತ್ಯೆ' (ಬಿ.ಎಂ.ಹನೀಫ್) ಬರಹ ಚಿಂತನೆ ಮಾಡುವಂತಿದೆ. ಬೆಂಗಳೂರು ಎಂದರೆ ಹೊರರಾಜ್ಯ, ದೇಶದವರಿಗೆ ಆಕರ್ಷಣೆಯ ಕೇಂದ್ರ. ಇಲ್ಲಿ ಕೆಲಸದ ಒತ್ತಡ, ಮೇಲಧಿಕಾರಿಗಳ ಕಿರುಕುಳ, ಮದ್ಯಪಾನಿ ಗಂಡನ ಕಿರುಕುಳ, ಖಿನ್ನತೆ ಮುಂತಾದ ಕಾರಣಗಳಿಗೆ ಜನ ಆತ್ಮಹತ್ಯೆಯ ಮೊರೆ ಹೋಗುತ್ತಿದ್ದಾರೆ. ಇದರ ತಡೆಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ಶ್ರೀನಾಥ್ ಕೊನೇಟಿ ಬೆಂಗಳೂರು, ಮಹಾವೀರ ಕಾಸರ ಶಿವಮೊಗ್ಗ

**ಅರ್ಥಪೂರ್ಣ**

ವಿಚಾರ ಲಹರಿಯಲ್ಲಿ 'ತನ್ನಾಶ್ರಯದ ರತಿಸುಖವನು' (ಮೂಚಿ) ಎಂಬ ವಿಚಾರವನ್ನು ಬಸವಣ್ಣನವರ ಜಯಂತಿ ಸಮಯಕ್ಕೆ ಸರಿಯಾಗಿ ಅವರ ಚಿಂತನೆಗಳನ್ನು ವಿವರಿಸಿದ್ದು ಅರ್ಥಪೂರ್ಣ.

—ಗಾಣಧಾಳು ರಾಮಣ್ಣ ಚಿತ್ರದುರ್ಗ, ರಾಜಶೇಖರ ಹಾದಿಮನಿ, ಎಚ್.ಆನಂದಕುಮಾರ್ ಚಿತ್ರದುರ್ಗ

**ಕಥೆಗಳು ಚೆನ್ನಾಗಿವೆ**

ಕಥೆ 'ಯಶೋಧರಾ' (ಗೀತಾ ಸೀತಾರಾಮ್) ಹಾಗೂ ಮಾಂಜರಿ (ಡಿ.ರಾಮನಮಲಿ) ಎರಡೂ ಕಥೆಗಳು ಚೆನ್ನಾಗಿವೆ.

—ಎಸ್.ವಿಜಯಕುಮಾರಿ, ಸುಂದರ್ ಬೆಂಗಳೂರು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

**ಮೇರುಗಾಯಕಿ**

'ಕಿಶೋರಿ ತಾಯಿ ಇನ್ನು ನೆನಪು ಮಾತ್ರ' (ಉಮಾ ಅನಂತ್) ಲೇಖನ ಚೆನ್ನಾಗಿದೆ. ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ಸೃಷ್ಟಿಸಿಕೊಂಡಿದ್ದ ಕಿಶೋರಿ ತಾಯಿ ತಮ್ಮ ಧ್ಯಾನಸ್ಥ ಗುಣದಿಂದಾಗಿ ಹಿಂದೂಸ್ತಾನಿ ಸಂಗೀತದ ಮೇರು ಗಾಯಕಿಯಾಗಿದ್ದರು.

—ಅಮೃತೇಶ್ ತಂಡರ ಅಣ್ಣಿಗೇರಿ

**ಅಚ್ಚರಿ ಗುಲಾಬಿ**

ವಂಡರ್‌ಪುಟದಲ್ಲಿ 'ಬಾಡದ ನೈಜ ಗುಲಾಬಿ' (ವಿದ್ಯಾ ವಿ. ಹಾಲಭಾವಿ) ಚಿತ್ರಲೇಖನ ನೋಡಿ ಅಚ್ಚರಿ ಆಯಿತು.

—ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ

**ಪೂರಕ ಮಾಹಿತಿ**

'ಕಾಡುಹಣ್ಣು ಕರೊಳು' (ದಿನೇಶ್ ಸಿ.ಎಚ್.) ಬರಹಕ್ಕೆ ಪೂರಕ ಮಾಹಿತಿ ಇಲ್ಲಿದೆ. ಕರೊಳು ಅನ್ನು ಕರುವಳ, ಕರುಗಳ ಎಂದೂ ಕರೆಯುತ್ತಾರೆ. ಇದನ್ನು ಮಜ್ಜಿಗೆ ಹುಳಿ, ಕಾಯಿಹುಳಿ, ಪಲ್ಯ ತಯಾರಿಸಲು ಬಳಸುತ್ತಾರೆ. ಪೋಷಕಾಂಶಗಳ ಆಗರವಾಗಿರುವ ಕರೊಳು ಇತ್ತೀಚೆಗೆ ವಿರಳವಾಗುತ್ತಿದೆ.

—ಕೊಕ್ಕಡ ವೆಂಕಟ್ರಮಣ ಭಟ್ ಮಂಡ್ಯ

**ಸಾಮರಸ್ಯದ ಪ್ರತೀಕ**

'ಸಂತೆಬೆನ್ನೂರಿನ ಸಂತೆ ಹೊಂಡ' ಬರಹ (ಜಿ.ಆರ್.ಪಂಡಿತ್ ಸಾಗರ) ಖುಷಿ ತಂದಿತು. ಪುಷ್ಕರಣಿ, ರಾಮದೇವಾಲಯ ಹಾಗೂ ಮಸೀದಿ ಎಲ್ಲವೂ ಒಂದೆಡೆ ಸೇರಿ ಕೋಮು ಸಾಮರಸ್ಯದ ಪ್ರತೀಕದಂತಿದೆ.

—ರವೀಂದ್ರನಾಥ ಶಿ.ಯಡಹಳ್ಳಿ, ಎಸ್.ಎನ್. ಭಾರತಿ ಸಂತೇಬೆನ್ನೂರು, ಕೊಹಿಮ ಬಸರಕೋಡ, ಪ.ಚಂದ್ರಕುಮಾರ ಗೌನಹಳ್ಳಿ

**ಸಾಧನೆ**

'ಸಹೋದರರ ಸವಾಲ್' (ಕೃಷ್ಣಪ್ರಶಾಂತ್ ವಿ. ಗೇರುಕಟ್ಟೆ) ಲೇಖನ ಆಪ್ತವಾಯಿತು. ವಿಲಿಯಮ್ ಮತ್ತು ರೊನಾಲ್ಡ್ ಹೈನುಗಾರಿಕೆ ಯಿಂದ ಹೇಗೆ ಯಶಸ್ಸು ಸಾಧಿಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

—ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ, ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ

**ಸವಿನೆನಪು**

ಶಾಂತಾ ನಾಗರಾಜ್ ಅವರು ತಮ್ಮ ಸವಿ ಸವಿ ನೆನಪುಗಳನ್ನು ಓದುಗರಿಗೆ ರುಚಿಕಟ್ಟಾಗಿ ಉಣಬಡಿಸಿದ್ದಾರೆ.

— ಎಚ್.ಎಸ್. ಶ್ರೀಮತಿ ಬೆಂಗಳೂರು

**ಸಕಾಲಿಕ**

'ಸೆಲೆಬ್ರಿಟಿ'ಯಲ್ಲಿ ಅಕ್ಷಯ್ ಕುಮಾರ್ ಬಗೆಗಿನ ಬರಹ (ಹನಿ) ಸಕಾಲಿಕ. ಹಿಂದಿ ಚಿತ್ರರಂಗದಲ್ಲಿ ಇಂದಿಗೂ ಬೇಡಿಕೆಯ ನಟರಾದ ಅಕ್ಷಯ್ ಕುಮಾರ್ 'ಜಂಟಲ್‌ಮನ್' ಎನ್ನುವುದರಲ್ಲಿ ಸಂಶಯವಿಲ್ಲ.

—ಬಿ.ಎಸ್.ಎನ್. ರಾವ್ ಮಂಡ್ಯ

**ಸಂದರ್ಶನ—ತಿದ್ದುಪಡಿ**

ಆರ್‌ಜೆ ರೋಹಿತ್ ಸಂದರ್ಶನ (ಏ. 20 ) ಬರಹ (ಸುಧಾ ಹೆಗಡೆ) ದಲ್ಲಿ ಕೆಲವು ತಪ್ಪುಗಳಿವೆ. ಈ ಕೆಳಗಿನಂತೆ ತಿದ್ದಿ ಓದಬೇಕಾಗಿ ವಿನಂತಿ.

* 'ಕರ್ವ' ಚಿತ್ರಕಥೆಗಾಗಿ ನಾನು ಮತ್ತು ನಿರ್ದೇಶಕ ನವನೀತ್ 6=7 ತಿಂಗಳು ಕೆಲಸ ಮಾಡಿದ್ದೇವೆ.
* ರವಿಚಂದ್ರನ್ ಸರ್ 'ಕರ್ವ'ದ ಯಾವುದೇ ವಿಭಾಗದ ಭಾಗವಾಗಿಲ್ಲ. ಅವರು ನನ್ನ ಮುಂದಿನ ಸಿನಿಮಾ 'ಬಕಾಸುರ'ದಲ್ಲಿ ಇದ್ದಾರೆ.
* ರಾಜಕೀಯದ ಬಗ್ಗೆ: ಯುವಜನರಲ್ಲಿ ಬದಲಾವಣೆ ತರಲು ಚುನಾವಣೆಯಲ್ಲಿ ಸ್ಪರ್ಧಿಸಿದ್ದೆ.

—ಆರ್.ಜೆ. ರೋಹಿತ್ ಬೆಂಗಳೂರು



ಸಂಧಿಲಿನ್
SANDHILIN सन्धिलिन
ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
CLINICALLY PROVED


ಗಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.
ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ